# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 722
ಉತ್ತರಿಸಬೇಕಾದ ದಿನಾಂಕ : 12.07.2023
ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯಲ್ಲಿನ ಜಮೀನುಗಳ ದಾಖಲೆಯಾದ ಆರ್.ಟಿ.ಸಿ.ಯಲ್ಲಿ ಪಟ್ಟೆದಾರರ ಹೆಸರನ್ನು ಕೈಬಿಡುವಂತೆ ಅಥವಾ ರದ್ದುಪಡಿಸುವಂತೆ ಬೇಡಿಕೆ ಇದ್ದು, ಈ ಬೇಡಿಕೆಯ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಆರ್.ಟಿ.ಸಿ. ಯಲ್ಲಿ ಪಟ್ಟೆದಾರರ ಹೆಸರನ್ನು ಕೈ ಬಿಡಲಾಗಿದೆಯೇ; ಕೈಬಿಡಲು ಆದೇಶ ಹೊರಡಿಸಿದ್ದಲ್ಲಿ, ಸದರಿ ಆದೇಶದ ಪ್ರತಿಯನ್ನು ಒದಗಿಸುವುದು; ಕೈ ಬಿಡದೆ ಇದ್ದಲ್ಲಿ ಪಟ್ಟೆದಾರರ ಹೆಸರನ್ನು ಕೈಬಿಡಲು ಇರುವ ಸಮಸ್ಯೆಗಳೇನು; ಈ ಸಮಸ್ಯೆಗಳನ್ನು ಸರಿಪಡಿಸಿ ಪಟ್ಟೆದಾರರ ಹೆಸರನ್ನು ಆರ್.ಟಿ.ಸಿ.ಯಲ್ಲಿ ಕೈಬಿಡಲು ಸರ್ಕಾರವು ಕ್ರಮವಹಿಸುವುದೇ; | ಕೊಡಗು ಜಿಲ್ಲೆಯಲ್ಲಿನ ಪಟ್ಟೆದಾರರ ಜಮೀನುಗಳ ದಾಖಲೆಯಾದ ಆರ್.ಟಿ.ಸಿ ಯಲ್ಲಿ ಪಟ್ಟೆದಾರರ ಹೆಸರನ್ನು ಕೈಬಿಡುವಂತೆ ಅಥವಾ ರದ್ದು ಪಡಿಸುವಂತೆ ಬೇಡಿಕೆ ಇದ್ದು, ಇಂತಹ ಪ್ರಕರಣಗಳಲ್ಲಿ ಪರಿಶೀಲಿಸಿ ಹಕ್ಕುದಾರರ ಹೆಸರಿಗೆ ಖಾತೆ ವರ್ಗಾಯಿಸಲು ಕ್ರಮ ವಹಿಸಲಾಗುತಿದ್ದು, ಕೊಡಗು ಜಿಲ್ಲೆಯಲ್ಲಿ ಕಂದಾಯಕ್ಕೆ ದಾಖಲಿರುವ ಜಮೀನಿನ ಪಹಣಿಯಲ್ಲಿ ನಮೂದಿರುವ ಪಟ್ಟೆದಾರರು ಮರಣಹೊಂದಿದ್ದು ಸದರಿಯವರ ಹೆಸರನ್ನು ಕೈಬಿಡಲು ಕೋರಿಕೆ ಬಂದಲ್ಲಿ ಕುಟುಂಬಸ್ಥರ ಒಪ್ಪಿಗೆ, ಪಾಲುಪಾರಿಕತ್ವದ ಆಧಾರದಲ್ಲಿ ನಿಯಮಾನುಸಾರ ಅರ್ಹ ಹಕ್ಕುದಾರರ ಹೆಸರಿಗೆ ಖಾತೆಯಲ್ಲಿ ಹೆಸರು ದಾಖಲಿಸಲು ಕ್ರಮ ವಹಿಸಲಾಗುತ್ತಿದೆ. |
| ಆ | ಆರ್.ಟಿ.ಸಿ.ಯ ಬೆಳೆ ಕಾಲಂನಲ್ಲಿ ಕಾಫಿ ಬೆಳೆಯನ್ನು ಶಾಶ್ವತವಾಗಿ ದೃಢೀಕರಿಸುವ ಅಥವಾ ನಮೂದಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ರ ಪತ್ರ ಸಂಖ್ಯೆ: **ಸಿಆಸುಇ (ಇ-ಆ) 100 ಅಮುಕ 2021 ದಿನಾಂಕ:17-03-2021 ರಂತೆ** ಯಾವುದೇ ರೀತಿಯ ಬೆಳೆ ಮಾಹಿತಿಯಲ್ಲಿ ಬದಲಾವಣೆ ಅಗತ್ಯ ವಿದ್ದಲ್ಲಿ ಅದನ್ನು ಬೆಳೆ ಸಮೀಕ್ಷೆ ವ್ಯವಸ್ಥೆಯಲ್ಲಿ ಸರಿಪಡಿಸಿ ನಂತರ ಭೂಮಿ ತಂತ್ರಾಂಶಕ್ಕೆ ವರ್ಗಾಯಿಸಿ, ಇಂಡೀಕರಿಸುವುದು" ಎಂದು ತಿಳಿಸಿರುತ್ತಾರೆ. ಆದುದರಿಂದ ಬೆಳೆ-ಸಮೀಕ್ಷೆ (Crop-Survey) ತಂತ್ರಾಂಶದ ಮೂಲಕ ಸ್ವೀಕೃತವಾಗುವ ಬೆಳೆ ವಿವರಗಳನ್ನು ಮಾತ್ರ ಪಹಣಿ ಪತ್ರಗಳಲ್ಲಿ ದಾಖಲಿಸಲಾಗುತ್ತಿದೆ. |
| ಇ | ಕೊಡಗು ಜಿಲ್ಲೆಯಲ್ಲಿ ಖಾಲಿ ಬಾಣೆ ಜಮೀನುಗಳಿಗೆ ಕಂದಾಯ ನಿಗದಿ ಮಾಡುವಂತೆ ಬೇಡಿಕೆ ಇದ್ದು, ಈ ಕುರಿತು ಸರ್ಕಾರ ಕ್ರಮ ಕೈಗೊಂಡಿದೆಯೇ; | ಹೌದು.<br>ಕೊಡಗು ಜಿಲ್ಲೆಯಲ್ಲಿ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 53 ಶಾಸನ 2011, ದಿನಾಂಕ:01.02.2013 ರನ್ವಯ ಜಮ್ಮಾ ಮತ್ತು ಇತರೆ ಬಾಣೆ ಜಮೀನುಗಳಲ್ಲಿ ಕೃಷಿ ಮಾಡಿರುವ ಜಮೀನುಗಳಿಗೆ ಕೃಷಿ ಆಧಾರದ |

| | | |
|---|---|---|
| | ಕೈಗೊಂಡಿದ್ದಲ್ಲಿ, ಈ ಪ್ರಕ್ರಿಯೆಯು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | ಮೇಲೆ ಕಂದಾಯ ನಿಗಧಿಪಡಿಸಲಾಗುತ್ತಿದೆ ಮತ್ತು ಕೃಷಿ ಮಾಡದೆ ಇರುವ ನಿಬಂಧನೆಗಳ ಜಮೀನುಗಳಿಗೆ ಖುಷ್ಕಿ ಕಂದಾಯ ದರವನ್ನು ನಿಗಧಿಪಡಿಸಿ ಕಂದಾಯ ನಿಗದಿಪಡಿಸಲಾಗುತ್ತಿದೆ. |
| ಈ | ಆರ್.ಟಿ.ಸಿ.ಯಲ್ಲಿನ ಬೆಳೆ ಕಾಲಂನಲ್ಲಿ ಕಾಫಿ ಬೆಳೆಯನ್ನು ಶಾಶ್ವತವಾಗಿ ನಮೂದಿಸುವ ಹಾಗೂ ಖಾಲಿ ಇರುವ ಬಾಣಿ ಜಮೀನುಗಳಿಗೆ ಕಂದಾಯ ನಿಗದಿ ಮಾಡುವ ಕಾರ್ಯವನ್ನು ಸಕಾಲ ಯೋಜನೆ ವ್ಯಾಪ್ತಿಗೆ ತರಲು ಸರ್ಕಾರದ ನಿಲುವೇನು; (ವಿವರ ನೀಡುವುದು) | ಬಾಣಿ ಜಮೀನುಗಳಿಗೆ ಕಂದಾಯ ನಿಗಧಿ ಮಾಡುವ ಕಾರ್ಯವು ಸಕಾಲ ವ್ಯಾಪ್ತಿಗೆ ತರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. |

ಕಂಇ 182 ಎಂಎಲ್ಆರ್ಆರ್ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು